ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ
*ನಾಯಕನಿಗೂ, ಅಮಾಯಕನಿಗೂ ಏನು ಸಂಬಂಧ?*



ನಾಯಕ ಬಲೆ; ಅಮಾಯಕ ಮೀನು.

ನಾಗರತ್ನ ಎಂ.ಜಿ., ಬೆಂಗಳೂರು
*ಲೋ ವೇಯ್ಸ್ಟ್ ತೊಟ್ಟು ತೋರಬಾರದುದನ್ನು ಪ್ರದರ್ಶಿಸುವ ಲಲನೆಯರಿಗೆ ತಮ್ಮ ಸಲಹೆ ಏನು?*
ಕಾಮುಕರ ಕಣ್ಣಿಗೆ ಹಬ್ಬವಾಗುವುದು ಲಲನೆಯರ ಶ್ರಾದ್ಧಕ್ಕೆ ನಾಂದಿಯಾದೀತು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ನಗುವಿಗೂ, ಹಾಸ್ಯಕ್ಕೂ ವ್ಯತ್ಯಾಸವೇನು?*
ಅಮ್ಮ-ಮಗುವಿನ ಸಂಬಂಧ; ಹಾಸ್ಯ ಅಮ್ಮ; ನಗು ಮಗು.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಹೆಣ್ಣನ್ನು ಅರ್ಥ ಮಾಡಿಕೊಳ್ಳಬೇಕು ಎನ್ನುತ್ತಾರಲ್ಲಾ, ಅವಳೇನು ಪ್ರಶ್ನೆಯೇ?*
ಅಲ್ಲ; ಒಗಟು.

ಹಾಡ್ಯ ಬ. ಜಯಾನಂದ, ಮೈಸೂರು
*ಕೆರೆಯ ನೀರನು ಕೆರೆಗೆ ಚೆಲ್ಲಿ ಎಂದರು ದಾಸರು. ಈಗಿನ ರಾಜಕಾರಣಿಗಳು?*



ಕೆರೆಯ ನೀರನು ಹೊರಗೆ ಚೆಲ್ಲಿ ಲೇಔಟು ಮಾಡಿ ಬಲು ಲಾಭ ಪಡೆಯಿರೊ......

ಎಂ.ಎ. ಕುಮಾರ್, ಬೆಂಗಳೂರು
*ಪತ್ನಿಯನ್ನು ತಲೆಯ ಮೇಲೆ ಕೂಡಿಸಿಕೊಂಡರೆ ಒಳ್ಳೆಯದೋ, ತೊಡೆಯ ಮೇಲೆ ಕೂಡಿಸಿಕೊಂಡರೆ ಒಳ್ಳೆಯದೊ?*
ಆಕೆಯನ್ನು ಡ್ರಮ್ಮಾಗಿಸಬೇಕೇನು? ಸೋಮಾರಿತನ ಬಿಟ್ಟು, ಟಿವಿ ಆಫ್ ಮಾಡಿ, ವಾಕಿಂಗ್ ಕರೆದುಕೊಂಡುಹೋಗಿ.

ಅಕ್ಷಯ ಜೈನ್, ಶ್ರವಣಬೆಳಗೊಳ
*ಮಾನಸ ಸರೋವರದಲ್ಲಿ ಸಂಗಾತಿ 'ನೈದಿಲೆ' ಆಗಬೇಕೆ?*
ಬೇಡ. ಬಾಡುವ ನೈದಿಲೆಗಿಂತ ನಿತ್ಯನೂತನ ಗಗನ ಪ್ರತಿಬಿಂಬ ಆಗಲಿ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಪ್ರಾಣಿಗಳನ್ನು ಮನುಷ್ಯರಿಗೆ ಹೋಲಿಸುವುದಿಲ್ಲ. ಆದರೆ ಮನುಷ್ಯರನ್ನು ಪ್ರಾಣಿಗಳಿಗೆ ಹೋಲಿಸುತ್ತಾರೆ. ಹೀಗೇಕೆ?*
ಉತ್ತಮವಾದುದಕ್ಕೆ ಅಧಮವಾದುದನ್ನು ಹೋಲಿಸುವುದು ಉಪಮಾಲಂಕಾರದ ಶ್ರೇಷ್ಠತೆ.

ಜಾಕೋಬ್ ಡಿಸೋಜ, ಕುರುವಳ್ಳಿ
*ದ್ವೇಷದಿಂದ ಪ್ರೀತಿ ಹುಟ್ಟುತ್ತಾ, ಪ್ರೀತಿಯಿಂದ ದ್ವೇಷ ಹುಟ್ಟುತ್ತಾ?*
ಎರಡೂ ಅಲ್ಲ; ಪ್ರೀತಿಯಿಂದ ಜಗ ಹುಟ್ಟತ್ತೆ; ದ್ವೇಷದಿಂದ ಜಗಳ ಹುಟ್ಟತ್ತೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
*ಅಮ್ಮ- ಈ ಪದದ ಅ & ಮ್ಮ ವಿಸ್ತರಿಸಿ ಅರ್ಥ ಹೇಳಿ?*
ಅಮ್ಮ = ಅಂಮ (ಬೀಚಿ ಕನ್ನಡ); ಅಂ – ಅಂತ್ಯವಿಲ್ಲದ; ಮ – ಮಮತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಸಿನಿಮಾ/ಧಾರಾವಾಹಿಗಳಲ್ಲಿ ಊಟಕ್ಕೆ ರೊಟ್ಟಿ/ಚಪಾತಿಯನ್ನು ಕೊಡದೆ ಬರೀ ಅನ್ನ ಸಾರನ್ನೇಕೆ ಹೆಚ್ಚಾಗಿ ಬಡಿಸುತ್ತಾರೆ?*
ಶೂಟಿಂಗಲ್ಲಿ ದೊರಕುವ ಚೂಪು ಚಪಾತಿ/ರೊಟ್ಟಿ ತಿಂದರೆ ಗಂಟಲಿಗೆ ಗಾಯವಾಗಿ ಡೈಲಾಗ್ ಹೇಳಲು ಆಗುವುದಿಲ್ಲವಂತೆ.

ಕೆ. ರಾಮಕೃಷ್ಣರೆಡ್ಡಿ, ಬೆಂಗಳೂರು
*ಬೆಂಗಳೂರಿನಲ್ಲಿ ಕಾವೇರಿ ನಗರ ಇದೆ. ಕಾವೇರಿ ರಸ್ತೆ ಎಕ್ಕಿಲ್ಲ ಗುರೂಜಿ?*
ಇದೆಯಲ್ಲ; ಬಿಡಬ್ಲ್ಯೂಎಸ್ಎಸ್‌ಬಿ ಪೈಪ್ ಒಡೆದು ಕಾವೇರಿ ನೀರು ಹರಿಯುವ ರಸ್ತೆಯೆಲ್ಲ ಕಾವೇರಿ ರಸ್ತೆಯೇ.

ರಾಜು ಎಸ್. ಗಾಲಿ, ಅಥಣಿ
*ದೊಡ್ಡವರ ತಪ್ಪಿಗೆ ಕ್ಷಮೆ, ಚಿಕ್ಕವರ ತಪ್ಪಿಗೆ ಶಿಕ್ಷೆ ನೀಡುವವರಿಗೆ ಏನು ಮಾಡಬೇಕು?*
ಅರ್ಜುನಮೋಹ, ಏಕಲವ್ಯದ್ರೋಹಕ್ಕೆ ದರ್ಪಣವಾದ 'ದ್ರೋಣ ಉಂಗುಷ್ಠ-ಶಿಕ್ಷಣ ವಿವೇಕ ಪ್ರಶಸ್ತಿ' ನೀಡಿ.

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು
*ನಾಗಿಣಿ ಧಾರಾವಾಹಿಯಲ್ಲಿ ಗರ್ಭಿಣಿಯಾದ ನಾಗಿಣಿ ಮರಿ ಹಾಕುತ್ತಾಳೋ ಅಥವಾ ಮೊಟ್ಟೆ ಇಡುತ್ತಾಳೋ?*
ವೀಕ್ಷಕರಿಗೆ ಸೀರಿಯಲ್ ಕಂತುಗಳ ಮರಿ ಹಾಕುತ್ತಾಳೆ; ನಿರ್ಮಾಪಕರಿಗೆ (ಹಣದ) ಮೊಟ್ಟೆ ಇಡುತ್ತಾಳೆ.

ಬಿ. ಚಂದ್ರೇಗೌಡ, ಬೆಂಗಳೂರು
*ಪಿತೃವಾಕ್ಯ ಪರಿಪಾಲನೆಗೂ, ಪತ್ನೀವಾಕ್ಯ ಪರಿಪಾಲನೆಗೂ ಏನು ವ್ಯತ್ಯಾಸ?*
ಎರಡರಿಂದಲೂ ದೊಡ್ಡ ರಾಮಾಯಣವೇ; ಒಂದರಿಂದ ವನವಾಸ; ಒಂದರಿಂದ ಮರಣ!

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ
*ಸಾಹಿತಿಗಳ ಕಿಸೆಯಲ್ಲಿ ಕಡ ತಂದ ಸಾಧನಗಳೇ ಇರುತ್ತವಂತೆ. ಹೌದೇ ರಾಮ್‌ಜೀ?*
ಶುದ್ಧ ಸುಳ್ಳು; ಕಳ್ಳತನದಿಂದ ತಂದವೂ ಇರುತ್ತವೆ.

ಮುಕುಂದ ಹೆರಕಲ್ಲ, ಕಲ್ಬುರ್ಗಿ
*ವಯಸ್ಸು ಎಂಬತ್ತು ದಾಟಿದರೂ ಮಂತ್ರಿಪದವಿ ಬಯಸುವ ರಾಜಕಾರಣಿಗಳಿಂದ ನಾವು ಏನು ನಿರೀಕ್ಷಿಸಬಹುದು?*



ಮಂತ್ರಿಯಾಗಿರುವಾಗಲೇ ತೀರಿಕೊಂಡರೆ – ಒಂದು ದಿನದ ರಜೆ.

ಕುಮಾರ ಚಲವಾದಿ, ಹೊಳೆನರಸಿಪುರ
*ಪ್ರತಿದಿನ ನನ್ನ ಹೆಂಡತಿ ನನ್ನ ಮೊಬೈಲ್ ಚೆಕ್ ಮಾಡುತ್ತಾಳೆ. ಇದಕ್ಕೇನಾದರೂ ಪರಿಹಾರ ಇದೆಯೆ?*
ಹೂಂ. ರಹಸ್ಯಗಳನ್ನು ಸತಿಯ ಹೆಸರಿನ ಫೋಲ್ಡರಲ್ಲಿ ಇಡಿ; ತನ್ನ ಹೆಸರಿನ ಕಡತವನ್ನು ಆಕೆ ಚೆಕ್ ಮಾಡಲ್ಲ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹಣ ನೋಡಿ ಹೆಣ ಬಾಯಿ ಬಿಡುತ್ತೆ. ರಾಜಕೀಯ ನಾಯಕರು?*
ಹೆಣ ಮುಂದಿಟ್ಟುಕೊಂಡು ಹಣದ ಸತಿ–ಸುತರಿಗೆ ಮತ ನೀಡಿರೆಂದು ಬಾಯಿಬಾಯಿ ಬಿಡುತ್ತಾರೆ.

■ ರಾಮ್